ಈ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಬೆಲೆಯಲ್ಲಿನ ಕುಸಿತದಿಂದಾಗಿ ಸಕ್ಕರೆ ಉದ್ಯಮವು ತೀವ್ರತರವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 12.60 ಲಕ್ಷ ಟನ್ ಸಕ್ಕರೆ ದಾಸ್ತಾನಿದ್ದು ಇದರ ಅಂದಾಜು ಮೌಲ್ಯ ರೂ. 1,400 ಕೋಟಿ ಆಗುತ್ತದೆ. ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೊಡಬೇಕಾದ ಒಟ್ಟು ಕಬ್ಬು ಬಿಲ್ಲಿನ ಬಾಕಿ ರೂ. 285.06 ಕೋಟಿ ಆಗುತ್ತದೆ. ಕೇಂದ್ರ ಸರ್ಕಾರದ ಆದೇಶದಂತೆ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ರೈತರ ಕಬ್ಬಿನ ಬಿಲ್ಲಿನ ಬಾಕಿ ತೀರಿಸಲು ಸಾಧ್ಯವಾಗಿರುವುದಿಲ್ಲ. ಸಕ್ಕರೆ ಬೆಲೆಯಲ್ಲಿ ತೀವ್ರವಾದ ಕುಸಿತ ಉಂಟಾಗಿದೆ.

2002–03ನೇ ಸಾಲಿಗೆ ಸಂಬಂಧಿಸಿದಂತೆ ಒಟ್ಟು ರೂ. 1160.55 ಕೋಟಿ ಬಾಕಿ ಪಾವತಿ ಮಾಡಬೇಕಾಗಿದ್ದು ಇದರ ಪೈಕಿ ರೂ. 920.24 ಕೋಟಿ ಪಾವತಿ ಮಾಡಲಾಗಿದ್ದು ರೂ. 239.30 ಕೋಟಿ ಪಾವತಿಯಾಗಬೇಕಾಗಿದೆ. ಹಿಂದಿನ ವರ್ಷಗಳ ಬಾಕಿ ರೂ. 46.52 ಕೋಟಿ ಸೇರಿಸಿದಲ್ಲಿ ಒಟ್ಟು ಪಾವತಿ ಮಾಡಬೇಕಾದ ಮೊತ್ತ ರೂ. 285.06 ಕೋಟಿ ಇರುತ್ತದೆ. ಕೆಲವೊಂದು ಕಾರ್ಖಾನೆಗಳು ತಮ್ಮದೇ ಹಣಕಾಸಿನ ಅಶಿಸ್ತಿನಿಂದಾಗಿ ಬಾಕಿ ಉಳಿಸಿಕೊಂಡಿವೆ. ಅಂತಹ ಕಾರ್ಖಾನೆಗಳ ವಿರುದ್ಧ ಕಬ್ಬು (ನಿಯಂತ್ರಣ) ಆದೇಶ 1966ರ ಅನ್ವಯ ಕ್ರಮ ಜರುಗಿಸಲಾಗುತ್ತಿದೆ. ಕಬ್ಬು ಬೆಲೆ ಬಾಕಿ ತೀರಿಸಲು ಸರ್ಕಾರವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು ಈ ದಿಸೆಯಲ್ಲಿ ತೀರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ 6 ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರೂ. 34.72 ಕೋಟಿಗಳಷ್ಟು ಮೃದು ಸಾಲವನ್ನು ಮಂಜೂರು ಮಾಡಿ ರೈತರ ಕಬ್ಬು ಬೆಲೆ ಬಾಕಿ ತೀರಿಸುವಲ್ಲಿ ಸಹಾಯ ಮಾಡಿದೆ.

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಕಾರ್ಖಾನೆಯ ಹೆಸರು		ಯಾವ ಸಾಲಿನಲ್ಲಿ ಬಿಡುಗಡೆಯಾಗಿದೆ	ಮೊತ್ತ
1.	ಪಾಂಡವಪುರ,	ಸಸಕಾ	2002–03	12.30
2.	ಕರ್ನಾಟಕ	"	2001–02	4.00
3.	ಶ್ರೀ ಶ್ರೀ ರಾಮ	"	2001–2002	6.00
4.	ಶ್ರೀ ವಾಣಿವಿಲಾಸ	"	2001–02	5.00
5.	ಆಳಂದ	"	2002–02	5.50
6.	ದಕ್ಷಿಣ ಕನ್ನಡ	"	2003–04	1.92
			ಒಟ್ಟು	34.72

ಹುಬ್ಬಳ್ಳಿಯಲ್ಲಿ ರಫ್ತುವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾವಣೆ ಮಾಡಿರುವುದರ ಬಗ್ಗೆ

417? (1765) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದ್ದ ರಫ್ತು ವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾಯಿಸಿರುವುದು ನಿಜವೇ;

ಆ) ಹಾಗಿದ್ದರೆ, ಇದಕ್ಕೆ ಕಾರಣವೇನು?

ಇ) ರಪ್ತು ವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾಯಿಸಿರುವುದರಿಂದ ಧಾರವಾಡ, ನಗರದ ಬೆಳಗಾವಿ ಹಾವೇರಿ ಬಳ್ಳಾರಿ ರಾಯಚೂರು ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಗಳ ರೈತರಿಗೆ ಅನ್ಯಾಯ ಮಾಡಿದಂತೆ ಆಗಿಲ್ಲವೇ?

ಈ) ಹುಬ್ಬಳ್ಳಿಯು ಬಾಂಬೆ–ಪೂನಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದ ರಪ್ತು ಮಾಹಿತಿಗೆ ಒಳ್ಳೆಯ ಮುಖ್ಯ ಕೇಂದ್ರವಾಗಿದ್ದು, ಹಾಗೂ ಒಳ್ಳೆಯ ರಸ್ತೆ, ರೈಲು ಹಾಗೂ ವಿಮಾನ ಸೌಕರ್ಯಗಳನ್ನು ಹೊಂದಿರುವುದರಿಂದ ರಪ್ತು ವಲಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿಯೇ ಮುಂದುವರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಹುಬ್ಬಳ್ಳಿಯಲ್ಲಿ ರಪ್ತುವಲಯ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಇದಲಿಲ್ಲ ಕಾರಣ ಬಿಜಾಪೂರಕ್ಕೆ ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಎನ್.ಜಿ.ಇ.ಎಫ್.ನ ನೌಕರರ ವಜಾ ಮಾಡಿರುವುದನ್ನು ಕುರಿತು

4174 (4766): ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದ ಎನ್.ಜಿ.ಇ.ಎಫ್.ನಲ್ಲಿ ಸ್ವಯಂ ನಿವೃತ್ತಿ ಕೊಡದ ಕಾರಣಕ್ಕಾಗಿ ಎಷ್ಟು ಜನ ಉದ್ಯೋಗಿಗಳನ್ನು ವಜಾ ಮಾಡಲಾಗಿದೆ;

ಆ) ಈ ನೌಕರರಲ್ಲಿ ಅರ್ಧಕ್ಕೂ ಹೆಚ್ಚು ಜನ ಪರಿಶಿಷ್ಟ ಜಾತಿ/ಪ.ವರ್ಗಕ್ಕೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ವಜಾಗೊಂಡಿರುವ ಎಷ್ಟು ಜನ ನೌಕರರು ಈ ವರ್ಗಕ್ಕೆ ಸೇರಿದವರಾಗಿರುತ್ತಾರೆ;

ಇ) 24.02.2003ರ ಸರ್ಕಾರಿ ಆದೇಶದಂತೆ ಎನ್.ಜಿ.ಇ.ಎಫ್. ಎಷ್ಟು ಜನ ನೌಕರರ ಸೇವೆಯನ್ನು ಬೇರೆ ಬೇರೆ ಇಲಾಖೆಗಳ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ; ವಿವರ ಹೆಸರುಗಳನ್ನು ನೀಡುವುದು;

ಈ) ಮಂಡ್ಯದ ಮೈಸೂರು ಅಸಿಟೇಟ್ ಕಾರ್ಖಾನೆಯು ಸಹ ಮುಚ್ಚಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 45 ಜನ ನೌಕರರನ್ನು ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ತೆಗೆದುಕೊಂಡಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಎನ್.ಜಿ.ಇ.ಎಫ್. ನೌಕರರ ಸೇವೆಯನ್ನು ಹಿಂದಕ್ಕೆ ಪಡೆದು ಅವರಿಗೆ ಸ್ವಯಂ ನಿವೃತ್ತಿ ಯೋಜನೆ ನೀಡಲು ಕಾರಣವೇನು; ಇದು ತಾರತಮ್ಯ ನೀತಿಯಲ್ಲವೇ;

ಊ) ಈ ಹಿನ್ನೆಲೆಯಲ್ಲಿ ಇನ್ನು 12 ರಿಂದ 15 ವರ್ಷ ಸೇವೆ ಬಾಕಿ ಇರುವ ಮತ್ತು ಉದ್ಯೋಗದ ಅವಶ್ಯಕತೆ ಇರುವ ಪ.ಜಾ/ಪ. ವರ್ಗಕ್ಕೆ ಸೇರಿದ ಎನ್.ಜಿ.ಇ.ಎಫ್. ನೌಕರರನ್ನು ಬೇರೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇರೆಗೆ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?